ಕರ್ನಾಟಕ ಸರ್ಕಾರ

ಮಕ್ಕಳ ರಕ್ಷಣಾ ನಿರ್ದೇಶನಾಲಯ

ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಮೂರನೇ ಮಹಡಿ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01.

ಸಂಖ್ಯೆ: ಕೆಎಸ್‌ಐಸಿಪಿಎಸ್/ಲೆಪವಿ-01/ಕೌಶಲ್ಯ.ಅನು-15/2020-21 ದಿನಾಂಕ:29.01.2021

**ಸುತ್ತೋಲೆ**

ವಿಷಯ:ಸರ್ಕಾರಿ ಬಾಲಮಂದಿರ ಮತ್ತು ವೀಕ್ಷಣಾಲಯಗಳ ಮಕ್ಕಳಿಗೆ ಕೌಶಲ್ಯಭಿವೃದ್ಧಿ ತರಬೇತಿಗೆ ಅವಶ್ಯವಾದ ಸಾಮಗ್ರಿಗಳನ್ನು ಖರೀದಿಸಲು ಯಾವ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ವೆಚ್ಚ ಮಾಡಬೇಕು ಎಂದು ಸ್ಪಷ್ಟಿಕರಣ ನೀಡುವ ಕುರಿತು.

ಉಲ್ಲೇಖ:ಪ್ರಧಾನ ಕಛೇರಿಯ ಅನುದಾನ ಬಿಡುಗಡೆ ಆದೇಶ ಸಂಖ್ಯೆ: ಕರಾಸಮರಸೊ / ತರಬೇತಿ/ LST / 21 / 2019-20, ದಿನಾಂಕ:10.11.2020.

*****

ಸರ್ಕಾರಿ ಬಾಲಮಂದಿರ ಮತ್ತು ವೀಕ್ಷಣಾಲಯಗಳ ಮಕ್ಕಳಿಗೆ ಕೌಶಲ್ಯಭಿವೃದ್ಧಿ ತರಬೇತಿಗೆ ಅವಶ್ಯವಾದ ಸಾಮಗ್ರಿಗಳನ್ನು ಖರೀದಿಸಲು ಯಾವ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ವೆಚ್ಚ ಮಾಡಬೇಕು ಎಂದು ಸ್ಪಷ್ಟಿಕರಣದ ಸಲುವಾಗಿ ಕೆಲವು ಜಿಲ್ಲೆಗಳಿಂದ ಕೇಳಲಾಗಿದ್ದು, ಇದಕ್ಕೆ ಸ್ಪಷ್ಟೀಕರಣವನ್ನು ನೀಡಿ ಮೊದಲ ಆದ್ಯತೆಯನ್ನು ಖಜಾನೆ-2ರ ಮೂಲಕ ಬಿಡುಗಡೆ ಮಾಡಿರುವ ಲೆಕ್ಕ ಶೀರ್ಷಿಕೆ 2235-02-102-0-36ರ ಉಪ ಶೀರ್ಷಿಕೆ 221 (ಸಾಮಾಗ್ರಿ ಮತ್ತು ಸರಬರಾಜು)ರಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಖರೀದಿಸ ಬಹುದಾಗಿದೆ.

ಎರಡನೇಯದಾಗಿ ರೂ.17,00,000/-ಗಳನ್ನು ಕೌಶಲ್ಯಾಭಿವೃದ್ಧಿ, ಅಡಿಯಲ್ಲಿ ಉಲ್ಲೇಖದನ್ವಯ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದ್ದು, ಹೊಲಿಗೆ ಯಂತ್ರ ಹಾಗೂ ಇತರೇ ಸಮಾನವಾದ ಕೌಶಲ್ಯಾಭಿವೃದ್ಧಿ ಪರಿಕರಗಳನ್ನು ಉಪಶೀರ್ಷಿಕೆ 221 (ಸಾಮಗ್ರಿ ಮತ್ತು ಸರಬರಾಜು)ನಲ್ಲಿ ಅನುದಾನ ಖಾಲಿಯಾಗಿದ್ದಲ್ಲಿ ಮಾತ್ರ ಉಲ್ಲೇಖದನ್ವಯ ಬಿಡುಗಡೆಯಾದ ಅನುದಾನದಿಂದ ಖರೀದಿಸಿ ಮಕ್ಕಳಿಗೆ ಆಸಕ್ತಿ ಇರುವ ಕೌಶಲ್ಯಾಭಿವೃದ್ದಿಯನ್ನು ಹೆಚ್ಚಿಸಲು ಹಾಗೂ ಜೀವನೋಪಾಯದ ಬಗ್ಗೆ ತರಬೇತಿಯ ಕಾರ್ಯಕ್ರಮಗಳನ್ನು ಕೈಗೊಂಡು ಅನುದಾನವನ್ನು ಖರ್ಚು ಮಾಡಿ ಉಪಯುಕ್ತತಾ ಪ್ರಮಾಣ ಪತ್ರ (UC) ಒದಗಿಸಲು ಈ ಮೂಲಕ ಸೂಚಿಸಲಾಗಿದೆ.

ಒಟ್ಟಾರೇ ಉಲ್ಲೇಖದನ್ವಯ ಬಿಡುಗಡೆಯಾದ ಅನುದಾನವನ್ನು ಪ್ರಧಾನವಾಗಿ ಕೌಶಲ್ಯಾಭಿವೃದ್ಧಿ ತರಬೇತಿಯ ಶುಲ್ಕ ಪಾವತಿ ಸಲುವಾಗಿ ಮತ್ತು ಉಪ ಶೀರ್ಷಿಕೆ 221 ರಡಿ ಲಭ್ಯವಿರುವ ಮೊತ್ತವನ್ನು ಕೌಶಲ್ಯಭಿವೃದ್ದಿಗೆ ಸಂಬಂಧಿಸಿದ ಪರಿಕರಗಳ ಸಂಗ್ರಹಣೆಗೆ ಬಳಸುವುದು. ಉಪಶೀರ್ಷಿಕೆ 221ರ ಮೊತ್ತವು ಖಾಲಿಯಾಗಿದ್ದಲ್ಲಿ ಮಾತ್ರ ಉಲ್ಲೇಖದನ್ವಯ ಬಿಡುಗಡೆಯಾದ ಅನುದಾನದಿಂದ ಕೌಶಲ್ಯಾಭಿವೃದ್ದಿಗೆ ಸಂಬಂಧಿಸಿದ ಪರಿಕರಗಳ ಖರೀದಿ ಮಾಡಬಹುದು ಎಂದು ಈ ಮೂಲಕ ಸೂಚಿಸಲಾಗಿದೆ.

29.01.2021

ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು

ಪ್ರತಿಯನ್ನು:

1. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, 30 ಜಿಲ್ಲೆಗಳು.
2. ಅಧೀಕ್ಷಕರು, ಬಾಲಮಂದಿರ ಹಾಗೂ ವೀಕ್ಷಣಾಲಯ, 30 ಜಿಲ್ಲೆಗಳು